ಅಧ್ಯಕ್ಷರು: ತಾವು ಮಂತ್ರಿಗಳು ಉತ್ತರ ಹೇಳಿ. ಪ್ರಶ್ನೆಯೇ ಸರಿ ಇಲ್ಲವೆಂದು ಕಾಣುತ್ತದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಅನುದಾನಿತ ಕಾಲೇಜ್ ಅಲ್ಲಿ ಇರುವುದರಿಂದ, ನಾವು ಅನುದಾನ ನೀಡುತ್ತಿದ್ದೇವೆ. ಹಾಗೂ ಅಲ್ಲಿರುವ ಉಪಾಧ್ಯಾಯರಿಗೂ ಕೂಡ ನಾವು ಸಂಬಳವನ್ನು ಕೊಡುತ್ತಿದ್ದೇವೆ. ಹೀಗಿರುವಾಗ ಮತ್ತೊಂದು ಸರ್ಕಾರಿ ಕಾಲೇಜ್‌ನ್ನು ಅಲ್ಲಿಗೆ ಕೊಟ್ಟರೆ ಅನುದಾನಿತ ಕಾಲೇಜಿಗೆ ಬರುವಂಥ ಮಕ್ಕಳು ಕಡಿಮೆ ಯಾಗುತ್ತದೆ. ಹೀಗಾಗಿ ಅಲ್ಲಿರುವ ಉಪಧ್ಯಾಯರನ್ನು ಬೇರೆ ಕಡೆ ವರ್ಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹತ್ತಿರದಲ್ಲಿ ಯಾವ ಕಾಲೇಜ್ ಇಲ್ಲ ಎಂದರೆ, ಹಾಗೂ ಬಹಳ ದೂರದಲ್ಲಿ ಕಾಲೇಜ್ ಇದೆ ಎಂದರೆ, ಅವಶ್ಯಕತೆಯನ್ನು ನೋಡಿ ಪರಿಶೀಲನೆ ಮಾಡಿ ನೋಡುತ್ತೇವೆ.

ಮಾಗಡಿಯಲ್ಲಿ ಉತ್ತಮ ಸಾರ್ವಜನಿಕ ಗ್ರಂಥಾಲಯದ ಕೊರತೆ

23 (64)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿಯಲ್ಲಿ ಉತ್ತಮ ಸಾರ್ವಜನಿಕ ಗ್ರಂಥಾಲಯ, ಗ್ರಂಥಪಾಲಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈಗ ಇರುವ ಗ್ರಂಥಾಲಯಕ್ಕೆ ಸ್ವಂತ ಕಟ್ಟಡ, ಬೆಳಕು ವ್ಯವಸ್ಥೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸ್ವಂತ ಕಟ್ಟಡವಿರುವ ಉತ್ತಮ ಗ್ರಂಥಾಲಯ ಆರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ಯಾವಾಗ ಆರಂಭಿಸಲಾಗುವುದು ಹಾಗೂ ಯಾವ ಸ್ಥಳದಲ್ಲಿ ಆರಂಭಿಸಲಾಗುವುದು?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):

ಅ) ಹೌದು

ಆ) ಹೌದು

ಇ) ಹೌದು. ಗ್ರಂಥಾಲಯ ಕಟ್ಟಡ ಕಟ್ಟಲು ಸ್ವಂತ ನಿವೇಶನ ಇರುವುದಿಲ್ಲ. ಒಂದು ನಿವೇಶನ ಹಂಚಿಕೆ ಮಾಡಲು ಪುರಸಭೆಯೊಂದಿಗೆ ವ್ಯವಹರಿಸಲಾಗುತ್ತಿದೆ. ನಿವೇಶನ

ದೊರಕಿದ ಕೂಡಲೇ ಕಟ್ಟಡದ ಕೆಲಸವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ಗ್ರಂಥಪಾಲಕರ ಮತ್ತು ಪುಸ್ತಕಗಳ ಕೊರತೆ ಇರುವುದನ್ನು ನೀಗಿಸುವುದು ತಮಗೆ ಆಗುವುದಿಲ್ಲವೆ? ನಾವು ಜಾಗವನ್ನು ಕೊಟ್ಟ ಮೇಲೆ ಕಟ್ಟಡ ಕಟ್ಟಿಸಿ ಕೊಡಿ, ಆದರೆ ಅದಕ್ಕಿಂತ ಮುಂಚಿತವಾಗಿ ನಾವು ಮೇಲ್ಕಾಣಿಸಿದ ಕೊರತೆಯನ್ನು ತಾವು ಆದಷ್ಟು ಬೇಗ ನೀಗಿಸಬೇಕೆಂದು ತಮ್ಮ ಮೂಲಕ ಸಚಿವರಿಗೆ ತಿಳಿಸಬಯಸುತ್ತೇನೆ.

ಶ್ರೀ ಆರ್.ಕೃಷ್ಣಪ್ಪ: ಅಧ್ಯಕ್ಷರೆ, ಗ್ರಂಥಪಾಲಕರ ಹುದ್ದೆ ತಾಲ್ಲೂಕು ಮಟ್ಟದಲ್ಲಿ ಬರುವುದಿಲ್ಲ. ಅಲ್ಲಿ ಈಗಾಗಲೇ ಸಹಾಯಕ ಗ್ರಂಥ ಪಾಲಕರು ಇದ್ದಾರೆ. ಅಲ್ಲಿ ಮುನಿಸಿಪಾಲಿಟಿಯವರು ಕೊಟ್ಟಿರುವ ಕಟ್ಟಡ ಹಳೆಯದಾಗಿದೆ. ಆದ್ದರಿಂದ ಹೊಸ ಕಟ್ಟಡ ಕಟ್ಟುವುದಕ್ಕೆ ಅವರು ಜಾಗ ಕೊಡುತ್ತೇನೆ ಎಂದರು, ಇನ್ನೂ ಜಾಗ ಕೊಟ್ಟಿಲ್ಲ. ಅವರು ಜಾಗ ಕೊಟ್ಟ ನಂತರ ಕಟ್ಟಡವನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೇವೆ.

ಗೇರುಸೊಪ್ಪಾದಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆ ಸ್ಥಾಪನೆ,

24(145)

ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಗೇರಸೊಪ್ಪಾದಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆ ಸ್ಥಾಪನೆಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಇ) 1997-98ನೇ ಸಾಲಿನಲ್ಲಿ ಗೇರುಸೊಪ್ಪದಲ್ಲಿ ಪ್ರೌಢಶಾಲೆ ಸ್ಥಾಪನೆಗೆ ಮಂಜೂರಾತಿ ನೀಡಲಾಗುವುದೇ?

ಈ) ಇಲ್ಲದಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ